2. ರೂ. 1,22,80,000-00 ಗಳನ್ನು ದುರಸ್ತಿಗಾಗಿ ಖರ್ಚು ಮಾಡಲಾಗಿದೆ.

3. ತುಮಕೂರು ಜಿಲ್ಲೆಯಲ್ಲಿ 29 ಮಸೀದಿಗಳಿಗೆ ದುರಸ್ತಿಗಾಗಿ ರೂ. 6,85,000-00 ಹಣವನ್ನು ಮಂಜೂರು ಮಾಡಲಾಗಿದೆ.

ವಿಷಯ :— ಪಾಂಡವಪುರದಲ್ಲಿ ಅಗ್ನಿಶಾಮಕ ಠಾಣೆ ತೆರೆಯುವುದು.

8(237) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಬಂದೀಖಾನೆ ಹಾಗೂ ರಕ್ಷಕದಳ ಸೇವೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕು ಉಪ ವಿಭಾಗದ ಮುಖ್ಯ ಕೇಂದ್ರವಾಗಿದ್ದು, ಅಲ್ಲಿ ಅಗ್ನಿಶಾಮಕ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಇದನ್ನು ಅಲ್ಲಿ ಪ್ರಾರಂಭ ಮಾಡಲು ಉದ್ದೇಶಿಸಲಾಗಿದೆಯೇ?

ಶ್ರೀ ಶಿವಣ್ಣನವರ್ ಬಸವರಾಜ ನೀಲಪ್ಪ (ಕಾರಾಗೃಹ, ಗೃಹರಕ್ಷಕದಳ ಸೈನಿಕ ಕಲ್ಯಾಣ ಮತ್ತು ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು) :—

ಅ) ಪಾಂಡವಪುರದಲ್ಲಿ ಅಗ್ನಿಶಾಮಕ ಠಾಣೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಪಾಂಡವಪುರ ಮಂಡ್ಯದಿಂದ ಸುಮಾರು 20 ಕಿ.ಮೀ. ಗಳ ದೂರದಲ್ಲಿದ್ದು ಬೇಕೆಂದಾಗ ಮಂಡ್ಯ ಮತ್ತು ಮೈಸೂರಿನಿಂದ ಅಗ್ನಿಶಾಮಕ ವಾಹನಗಳು ಇಲ್ಲಿಗೆ ಶೀಘ್ರವಾಗಿ ಬರಲು ಸಾಧ್ಯವಿದೆ. ಆದುದರಿಂದ ಇಲ್ಲಿ ಒಂದು ಪ್ರತ್ಯೇಕ ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವ ಉದ್ದೇಶ ಸದ್ಯಕ್ಕೆ ಇರುವುದಿಲ್ಲ.

ವಿಷಯ :— ಗ್ರಾಮಾಂತರ ಪ್ರದೇಶದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಹಸಿರು ಕಾರ್ಡ್‌ಗಳ ವಿತರಣೆ.

9(239) ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹಸಿರು ಕಾರ್ಡ್‌ನಿಂದ ವಂಚಿತರಾದವರನ್ನು ಗುರುತಿಸಿ ಕಾರ್ಡ್‌ಗಳನ್ನು ಹಂಚಿಕೆ ಮಾಡಲಾಗಿದೆಯೇ?